ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಬಂದಿದೆ

ಆ) ೧೯೮೭-೮೮ನೇ ಆರ್ಥಿಕ ಸಾಲಿನಿಂದ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಜಿಲ್ಲಾ ಪರಿಷತ್ತುಗಳ ಆತಳಿತ ವ್ಯಾಪ್ತಿಗೆ ವಹಿಸಿ ಈ ಕಾಮಗಾರಿಗಾಗಿ ಹಿಂದಿನ ಆರ್ಥಿಕ ಸಾಲಿನಿಂದ ಎಲ್ಲಾ ಜಿಲ್ಲಾ ಪರಿಷತ್ತುಗಳಿಗೂ ಹಣವನ್ನು ಒದಗಿಸಲಾಗುತ್ತಿದೆ. ಆದ್ಯತೆಯ ಮೇರೆಗೆ ಪರಿಗಣಿಸಲು ಜಿಲ್ಲಾ ಪರಿಷತ್ತುಗಳಿಗೆ ತಿಳಿಸಲಾಗಿದೆ.

ಇ) ಈ ವಿಷಯ ಜಿಲ್ಲಾ ಪರಿಷತ್ತಿನ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುವುದರಿಂದ, ಸಂಬಂಧಿಸಿದ ಜಿಲ್ಲಾ ಪರಿಷತ್ತು ಸೂಕ್ತ ಕ್ರಮ ಜರುಗಿಸಬೇಕಾಗುವುದು.

ಜೀರಾದ್ ತಾಲ್ಲೂಕಿನಲ್ಲಿ ರಸ್ತೆಕಾರ್ಯನಿರ್ವಾಹಣೆಗೆ ತಗುಲಿವ ವೆಚ್ಚದ ಬಗ್ಗೆ

೧೬೬೫. ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜೀರಾದ್).—ಮಾನ್ಯ ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜೀರಾದ ತಾಲ್ಲೂಕಿನಲ್ಲಿರುವ ಮೊಳಗಾಂ ಗ್ರಾಮದಿಂದ ಭೋಪಾಳಗಡ ಗ್ರಾಮದವರೆಗೆ ರಸ್ತೆಯ ಕಾಮಗಾರಿಗಾಗಿ ತಗುಲಿದ ವೆಚ್ಚವೆಷ್ಟು,

ಆ) ಆ ರಸ್ತೆಯಲ್ಲಿದೆ ಬೇನಾಮಿಯಾಗಿ ಹಣ ವೆಚ್ಚ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,

ಇ) ಹಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಕೈಗೊಂಡ ಕ್ರಮವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಮೊಳಗಾಂ ಗ್ರಾಮದಿಂದ ಭೋಪಾಳಗಡ ಗ್ರಾಮದವರೆಗಿನ ರಸ್ತೆಯನ್ನು ಎನ್. ಆರ್. ಇ. ಪಿ. (ಅಭಾವ) ಕಾರ್ಯಕ್ರಮದಲ್ಲಿ ೧೯೮೬-೮೭ನೇ ಸಾಲಿನಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ಸಂತೆಪೂರ ತೆಗೆದುಕೊಂಡಿದ್ದಾರೆ. ಈ ಕೆಲಸಕ್ಕೆ ಇಲ್ಲಿಯವರೆಗೆ ೪೬,೨೩೩-೦೦ ರೂ. ಖರ್ಚು ಮಾಡಲಾಗಿದೆ.

ಆ) ಆ ರಸ್ತೆಯಲ್ಲಿ ಬೇನಾಮಿಯಾಗಿ ಹಣ ವೆಚ್ಚ ಮಾಡಿರುವುದು ಕಾರ್ಯನಿರ್ವಾಹಕ ಇಂಜಿನಿಯರ್, ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ, ಬೀದರ್ ಅವರ ಗಮನಕ್ಕೆ ಬಂದಿಲ್ಲವೆಂದು ತಿಳಿಸಿದ್ದಾರೆ.

ಇ) ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನವರನ್ನು ಇದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದು ಕೊಳ್ಳುವಂತೆ ತಿಳಿಸಲಾಗುವುದು,

ಬಿಜಾಪುರ ಜಿಲ್ಲೆಯ ಕೂಡಲ ಸಂಗಮ ದೇವಾಲಯವನ್ನು ರಕ್ಷಿಸುವ ಬಗ್ಗೆ

೧೩೪೨. ಶ್ರೀ ಶಿವಾನಂದ ಹೆಚ್ ಕೌಜಲಗಿ,(ಬೈಲಹೊಂಗಲ).—ಮಾನ್ಯ ಕಂದಾಯ, ಯೋಜನೆ ಭಾರಿ ಹಾಗೂ ಪರಿಧ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ .

ಅ) ಬಿಜಾಪುರ ಜಿಲ್ಲೆಯ ಕೂಡಲ ಸಂಗಮ ದೇವಾಲಯವನ್ನು ರಕ್ಷಿಸುವ ಸಲುವಾಗಿ ಸರ್ಕಾರ ದಿಂದ ನೇಮಿಸಲ್ಪಟ್ಟ ದಾತ್ಯ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದೆಯೇ ?

ಆ) ಹಾಗಿದ್ದಲ್ಲಿ ಆ ವರದಿಯನ್ನು ಸರ್ಕಾರ ಒಪ್ಪಿಕೊಂಡಿದೆಯೆ ?

ಇ) ಶ್ರೀ ದಾತ್ಯ ತಾಂತ್ರಿಕ ಸಮಿತಿಯು ವರದಿಯಲ್ಲಿ ಶ್ರೀ ಕೂಡಲ ಸಂಗಮೇಶ್ವರ ದೇವಾಲಯವನ್ನು ಇರುವಲ್ಲಿಯೇ ರಕ್ಷಿಸುವ ಸಾಧ್ಯತೆ ಬಗ್ಗೆ ವರದಿ ಇದೆಯೆ ?

ಈ) ಹಾಗಿದ್ದಲ್ಲಿ ಸರ್ಕಾರವು ಈ ದಿಸೆಯಲ್ಲಿ ಏನು ಕ್ರಮ ತೆಗೆದುಕೊಂಡಿದೆ ?